ಕಡೀ ಎಲ್ಲಾ ಓಟು ನಿಮ್ಗೆ...' ಎಂದು ಹೇಳಿದ.

'ಏನ್ ಮಾಡ್ಬೇಕು ಹೇಳು?' ಎಂದು ಮಲ್ಲಿಕಾರ್ಜುನ ಕೇಳುವಲ್ಲಿ ನಿರ್ಲಿಪ್ತನಾಗಿ ಶರಣಪ್ಪ, 'ನೋಡು ಮಲ್ಲು, ನಾನು ನೀನು ಒಂದೇ ಸಾಲಿಗ್ ಹೋಗಿದ್ವಿ. ಆದ್ರ ಹಾಲಳ್ಳಿಲಿ ಇರೋ ನಿಂ ಗುಡಿಗೆ ನಂಗೆ, ನಮ್ಮವರಿಗೆ ಕಾಲಿಡಕ್ಕ ಅವಕಾಶ್ ಮಾಡಿಕೊಟ್ಟಿಲ್ಲಾ, ನೋಡು' ಎಂದ.

'ಕಾಲಿಟ್ಟಿಲ್ಲ ಅಂದ್ರ, ಏನಾಯ್ತು? ಸಂಪ್ರದಾಯ ಹೌದಲ್ಲೇನೋ?' ಎಂದು ಮಲ್ಲಿಕಾರ್ಜುನ ಸಮಜಾಯಿಷಿ ನೀಡಿದ.

'ಜಾತಿ ಕುಲ ಕೇಳಿದ್ರ ಕೇಸ್ ಆಗ್ತದಂತ ಬೇರೆ ಊರಿಂದ ಬರೋ ನಂ ಮಂದಿಗೆ ಏನೂ ಮಾತಾಡದೆ ಸುಮ್ನೆ ಗುಡಿಯೊಳಗ ಬಿಡ್ತೀರಿ, ನಿಮಗಾ ನಂ ಹೆಸ್ರು ಜಾತಿ ಗೊತ್ತದ, ಅದ್ಕೆ ನಮ್ಮನ್ನ ಒಳಗ್ ಬಿಡಲ್ಲಾ, ಹೌದಲ್ಲೋ? ಗೊತ್ತಲ್ಲಾ ನಿನ್ಗ, ನಂ ಅಜ್ಜಾ ಅದೇ ಗುಡಿಗೇ ಇಟಂಗಿ ಹೊತ್ತಿದ್ದ. ನೋಡು, ಈ ಸಲ ಜಾತ್ರೀಗೆ ನೀನಾ ಮುಂದ ನಿಂತು ನಮ್ಗೆ ಒಳಗ ಕರ್ಕೋಬೇಕು. ಮತ್ತಾ... ಹಬ್ಬದ್ ದಿವ್ಸಾ ನಿಮ್ಮನಿವೊಳಗ ನಮ್ಮೆಲ್ರನ ಕರ್ದು ಹೋಳ್ಗಿ ಊಟ ಹಾಕಿಸಬೇಕ... ಅಷ್ಟೇ ಸಾಕು... ನಮ್ಮವ್ರ ಎಲ್ಲ ವೋಟು ಅಕ್ಕೋರಿಗೆ ಹಾಕ್ತಾರ' ಎಂದು ತನ್ನ ಆಸೆಯನ್ನು ಶರಣಪ್ಪ ತಿಳಿಸಿದ.

ಹೌಹಾರಿದ ಮಲ್ಲಿಕಾರ್ಜುನ, 'ಲೇ ಶರಣ್ಯಾ, ನಿಮ್ಮನ್ನ ಒಳಗ್ ಕರೆದ್ರ, ಓಟ್ ಬಿಡು, ಊರ್ ತುಂಬಾ ಗಲಾಟಿ ಆಗ್ತದ. ಇದನ್ನ ನಾನ್ ಮಾಡೀನಿ ಅಂತ ಗೊತ್ತಾದ್ರ, ನನ್ ಮಣ್ಣಿಗೂ ಯಾರೂ ಬರಲ್ಲ' ಎಂದು ಸಿಟ್ಟಾದ.

ಸ್ವಲ್ಪ ಸಮಾಧಾನವಾದ ನಂತರ, ಮಲ್ಲಿಕಾರ್ಜುನ, 'ಇಲ್ ನೋಡ್, ಶರಣು, ಮನಿ ಪದ್ಧತಿ ಎಲ್ಲಾ ಬಿಡ್ಲಾಕ್ ಬರಲ್ಲ. ಬೇಕಾದ್ರೆ ಹೇಳು, ಜಾತ್ರಿ ದಿನ, ತೇರು ಎಳಿವಂತ್ರಿ. ಹೋಳ್ಗಿ ಬೇಕಾದ್ರ ಗಾಡಿ ತುಂಬಾ ಮಾಡ್ಸಿ ನಿನ್ ಜಗಲಿ ಮುಂದ ಇಡ್ತೀನಿ' ಎಂದನು.

'ಅಣ್ಣಾರೇ, ನಾನು ಏನು ಪಾಪ ಮಾಡಿನೊ, ನನ್ ಮಡಿಲು ತುಂಬಿಲ್ಲಾ. ಈಗ ಮಡಿಮುಟ್ಟಚಟಿಲ್ಲಾ ಬಿಡು ಅಂದ್ರ ಹೆಂಗಾಗ್ತದೆ. ಬೇಕಾರೆ ಇನ್ನೊಂದು ಲಕ್ಷ ಜಾಸ್ತಿ ಕೇಳಿ ನಿಮ್ ಅಳಿಯನ್ ತರ, ಸಾಲ ಎತ್ತಿ ಕೊಟ್ಟೇವು' ಎಂದಳು ಚೆನ್ನಮ್ಮ.

ಇಲ್ಲಿಯವರೆಗೂ ಸ್ನೇಹಿತರಂತಿದ್ದ ಗಂಡ ಹೆಂಡತಿಯರ ಮಾತಿಗೆ ಬೇಸರಗೊಂಡ ಶರಣಪ್ಪನು 'ಇಷ್ಟೂ ಮಾಡಂಗಿಲ್ಲ ಅಂದ್ರ ವೋಟ್ ಕೇಳಬೇಡಿ' ಎಂದು ಕಲ್ಯಾಣದ ಕಾಡಿನ ಒಳಗೆ ನಡೆದನು.

ಇವನು ಎಲ್ಲಾದರು ಸಾಯಲಿ ಎಂದು ಮಲ್ಲಿಕಾರ್ಜುನ ಸುಮ್ಮನಿರುವಲ್ಲಿ, ಚೆನ್ನಮ್ಮಳು, 'ಏ ಬರ್ರಿ, ಎಲ್ ಹೋಗ್ಯಾರ್ ಸ್ವಲ್ಪ ನೋಡೋಣ್,' ಎಂದು ಶರಣಪ್ಪನ ಹೆಜ್ಜೆಯನ್ನು ಹಿಂಬಾಲಿಸಿದರು. ಹುಡುಕುತ್ತಿರುವಲ್ಲಿ ಶರಣಪ್ಪನು ಕಲ್ಯಾಣದ ಮಹಾಮನೆಯ ಮುಂದೆ ನಿಂತಿದ್ದನು. ಕಕ್ಕಯ್ಯ, ಚನ್ನಯ್ಯ, ಚಿಕ್ಕಯ್ಯ, ಬೊಮ್ಮಯ್ಯ, ಮಾರಯ್ಯ, ಚೌಡಯ್ಯ ಅನುಭವ ಮಂಟಪದ ಮುಂದೆ ಹಲವು ಕಾಯಕಗಳಲ್ಲಿ ತೊಡಗಿಸಿಕೊಂಡಿದ್ದರು. ಶರಣಪ್ಪ ಬಂದೊಡನೆ ಕಾಯಕಯೋಗಿಗಳು, 'ಶರಣು ಶರಣು' ಎಂದು ಮಹಾಮನೆಯ ಒಳಗಿನ ದಾರಿಯನ್ನು ತೋರಿದರು.

ಶರಣಪ್ಪನನ್ನು ಹಿಂಬಾಲಿಸಿದ ಗಂಡ ಹೆಂಡತಿಯರು, ಕಾಯಕಯೋಗಿಗಳನ್ನು ದಾಟಿ, ಮಹಾಮನೆಯ ಒಳಗೆ ಬಂದು ನೋಡುವಲ್ಲಿ, ಪ್ರಭುದೇವರ ಪರಂಜ್ಯೋತಿ ಉರಿಯುತ್ತಿತ್ತು. ಪರಂಜ್ಯೋತಿಯ ಬೆಳಕಿನಿಂದ ದಿಗ್ಭ್ರಾಂತರಾದ ಇವರನ್ನು ಕಂಡು ನೀಲಾಂಬಿಕೆಯು, 'ಶರಣು, ಬನ್ನಿ, ದಾಸೋಹವಾಗಲಿ, ಆಮೇಲೆ ಮಾತಾಡೋಣ' ಎಂದು ಹೇಳಿದರು. ಸ್ವಲ್ಪ ದೂರದಲ್ಲಿ ಬಸವಣ್ಣನವರು ತಾಳೆಗರಿಯ ಮೇಲೆ ಬರೆಯುತ್ತಿದ್ದುದನ್ನು ಕಂಡು, ಮಲ್ಲಿಕಾರ್ಜುನ ಓಡಿ ಹೋಗಿ ಅವರ ಕಾಲಿಗೆ ಬಿದ್ದು, 'ಅಣ್ಣ ಬಸವಣ್ಣ ನನ್ನ ಕಾಪಾಡು, ನಿನ್ ನೋಡಿದ್ ನನ್ ಜೀವನ ಧನ್ಯಾ ಆಯಿತು. ಶ್ಯಾನೆ ಪರಿಶಾನ್ ಅದೀನಿ. ನನ್ನ ಹೆಂಡತಿನ ಎಲೆಕ್ಷನ್ನಲ್ಲಿ ಗೆಲ್ಲಕ್ ಆಶೀರ್ವಾದ ಮಾಡು, ನಮ್ಮ ತಾತ ನಿಂಗ ಗುಡಿ ಕಟ್ಸ್ಯಾರ...' ಎಂದು ಕೇಳಿಕೊಳ್ಳುವಲ್ಲಿ ಬಸವಣ್ಣನವರು ಎದ್ದು ನಡೆದರು. ನಿತ್ಯ ಪೂಜಿಸುವ ತನ್ನ ದೈವವನ್ನು ಸಾಕ್ಷಾತ್ ನೋಡಿ ಚೆನ್ನಮ್ಮಳು ಮೂಕವಿಸ್ಮಿತಳಾದರೆ, ಶರಣಪ್ಪನು ಪ್ರಭುದೇವರ ಅರಿವಿನ ಪರಂಜ್ಯೋತಿಯ ಪ್ರಕಾಶಮಾನದಲ್ಲಿ ಲೀನನಾದನು. ನೀಲಾಂಬಿಕೆಯು ಇವರ ಬಳಿ ಬಂದು 'ಇಂದು ದೊಡ್ಡವರು ಬರುತ್ತಾರೆ, ದಾಸೋಹಕ್ಕೆ ಪೋಲಿಕೆಯನ್ನು ಮಾಡಬೇಕು,